dd-343
T.P-2

51st Year of Publication ★ SATYAVADI Daily, MYSORE 4

Reg No B G 155 27-7-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಆದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯಲ್ಲಿ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available

For Permanent Advertisement

ಸ್ಥಾಪಕರು : ಅರಸುನೆ ಸರತ್ತೀವಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ದೇಶದಲ್ಲಿ ಅತ್ಯಂತ ಹೆಚ್ಚು ತೆರಿಗೆ ರಾಜ್ಯ ಮೈಸೂರು

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ನಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಸೆದಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅಸಂ ನರಸಿಂಹಶ್ಯಂಗರ್ (ಹೊಂಗನೂರು) ರವರೂ ಶುಭಾಶಯದೊಡನೆ ಸೇವೆ ಗೈದಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ವುತ್ತು ಮೈಸೂರು ರಾಜ್ಯದಲ್ಲಿ ನಡೆದಂತೆ ಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಮುಸ್ಲಿಂರಲ್ಲೇ ಹೊಡೆದಾಟ

ತಿರುವೇಂದ್ರಂ— ವಿಧಾನಸಭೆಯ ಚುನಾವಣೆಯಲ್ಲಿ ಪ್ರಾರ್ಥನೆ ನಡೆಸುವ ಬಗ್ಗೆ ಎರಡು ವಿರೋಧ ಮುಸ್ಲಿಂ ಪಂಗಡಗಳಲ್ಲಿ ಜಗಳ ಹುಟ್ಟಿದ್ದು, ಹೊಡೆದಾಟವಾಗದಂತೆ ಕಾಂಗ್ರೆಸ್ಸಿಗರು ಮುಸ್ಲಿಂ ಲೀಗಿಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು — 25 ಮಂದಿ ಮುಸ್ಲಿಂರು ಬಂಧಿಸಲ್ಪಟ್ಟಿರುವರು.

ಗರ್ಭಪಾತ

ತಿರುವೇಂದ್ರಂ— ಗರ್ಭಪಾತವನ್ನು ಉದಾರಗೊಳಿಸಲು ಮಾಡುವ ಮಸೂದೆಯು ಮುಂದಿನ ಪಾರ್ಲಿಮೆಂಟು ಅಧಿವೇಶನದಲ್ಲಿ ಬರಲಿದೆ — ವಿವಾಹ ವಯಸ್ಸನ್ನು ಹುಡುಗಿಯರಿಗೆ 18 ಕ್ಕೆ, ಹುಡುಗರಿಗೆ 21 ಕ್ಕೆ ಹೆಚ್ಚಿಸುವ ಮಸೂದೆಯು ತಯಾರಾಗುತ್ತಿದೆಯೆಂದೂ, ಕೇಂದ್ರದ ಆರೋಗ್ಯ ಸಚಿವಾಲಯದ ಕಾರ್ಯದರ್ಶಿಯವರು ಹೇಳಿದರು.

★

ತಿಮಿಂಗಿಲಕ್ಕೆ ಏರಿಕೆಲ್ಪಟ್ಟ

ಲಂಡನ್— ಒಬ್ಬ ಒಳಭಾಗ ಅಲಂಕಾರ ಮಾಡುವವನು ಮತ್ತೊಬ್ಬನನ್ನು ಲಂಡನ್ ಪಾರ್ಕಿದಲ್ಲಿ ಗಿಡದ ಹತ್ತಿರ 7 ಅಡಿ ತಿಮಿಂಗಿಲದ ಬೆನ್ನಿಗೆ ಏರಿಸಿ ಅವನ ಕೈಗಳಿಗೆ 8 ಅಂಗುಲದ ಮೊಳೆ ಹೊಡೆದನು — ಆಂಬ್ಯುಲೆನ್ಸಿನವರು ಅವನನ್ನು ಕೆಳಗಿಳಿಸಿ ಆಸ್ಪತ್ರೆಗೆ ಸಾಗಿಸಿ ಮೊಳೆ ತೆಗೆಸಿದರು — ತಕ್ಷೀರುದಾತನು ಬಂಧಿಸಲ್ಪಟ್ಟನು.

ದಸರಾ

ಬೆಂಗಳೂರು— ಸೆಪ್ಟಂಬರು 23 ರಿಂದ ಅಕ್ಟೋಬರು 1 ರವರೆಗೆ ದಸರಾ ಮಹೋತ್ಸವವು ನಾಡು ಹಬ್ಬವಾಗಿ ವೈಭವವಾಗಿ ಆಚರಿಸಲು ಸರಕಾರ ನಿರ್ಧರಿಸಿದೆ — ಜಂಬೂ ಸವಾರಿಯು ನಡೆಯುವುದು — ಮೈಸೂರಿನಲ್ಲಿ ಅಖಿಲ ಭಾರತ ಕೈಗಾರಿಕೆ ಮತ್ತು ವ್ಯವಸಾಯ ವಸ್ತು ಪ್ರದರ್ಶನವು ಏರ್ಪಾಟಿದೆ.

★

ಅಡವಿಯಲ್ಲಿ ಸಿಕ್ಕಿದ ಹುಡುಗ

ಕೊಲಂಬೊ— 13 ವರ್ಷಗಳಿಂದ ಹುಲುಗಳು ಹುತ್ತು ಎಲೆಗಳನ್ನು ತಿಂದು ಜೀವಿಸುತ್ತಿರುವ ಒಬ್ಬ ಹುಡುಗನು ಸಿಲೋನಿನ ಒಂದು ಅರಣ್ಯದಲ್ಲಿ ಸಿಕ್ಕಿದನು — ಅವನನ್ನು ರಿಟಾರ್ಡ್ ಚಿಲ್ಡ್ರನ್ ಭವನದಲ್ಲಿ ಇಡಲಾಗಿದೆ.

★



ತಿರುವೇಂದ್ರಂನಲ್ಲಿ ನಡೆದ ಪ್ರದರ್ಶನದಲ್ಲಿ ವ್ಯವಸಾಯುಸಾಯ ಆವರಣಜಲ್ಲಿದ್ದ ಸಂಚಾರಿ ಮಣ್ಣು ಪರೀಕ್ಷೆಯ ಲ್ಯಾಬೊರೇಟರಿ

ಅತಿ ಹೆಚ್ಚು ತೆರಿಗೆ ರಾಜ್ಯ

ಬೆಂಗಳೂರು— ಇಡೀ ದೇಶದಲ್ಲಿ ಮೈಸೂರು ಅತಿ ಹೆಚ್ಚು ತೆರಿಗೆ ವಿಧಿಸಲ್ಪಟ್ಟಿರುವ ರಾಜ್ಯವಾಗಿರುವದೆಂದೂ, ನಾಲ್ಕನೇ ಯೋಜನೆಯಲ್ಲಿ ಹೆಚ್ಚು ತೆರಿಗೆ ವಿಧಿಸಲು ಅವಕಾಶವಿಲ್ಲವೆಂದೂ ಐದನೇ ಆರ್ಥಿಕ ಕಮಿಷನ್ನಿಗೆ ತಿಳಿಸಲಾಗಿದೆಯೆಂದೂ ಹಣಕಾಸಿನ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆ ಹೇಳಿಕುವರು.

★

ಡಾಕ್ಟರುಗಳ ರೋಷ

ಕರಾಚಿ— ಡಾಕ್ಟರುಗಳ ಬಗ್ಗೆ ಟೀಕಿಸಿ ಬರೆದ ಒಂದು ಉರ್ದು ಪತ್ರಿಕೆ ಆಫೀಸಿಗೆ 5ರಿ ಡಾಕ್ಟರುಗಳು ನುಗ್ಗಿ ಫೋಟೋಗ್ರಾಫರು, ರಿಪೋರ್ಟರು ಮತ್ತಿತರ ನೌಕರರನ್ನು ಚೆನ್ನಾಗಿ ಥಳಿಸಿದರು.

★

ಜಾರ್ಸರ ಪತ್ರ

ನ್ಯೂಯಾರ್ಕ್— ಅಧ್ಯಕ್ಷ ಜಾರ್ಸರು ಏಪ್ರಿಲ್ 4 ರಂದು ತಾವು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವದಿಲ್ಲವೆಂದು ತಿಳಿಸಿದ ಪತ್ರವನ್ನು ಹಾಜಿದಲ್ಲಿ ಒಬ್ಬ ಸ್ಟಾಕ್ ಬ್ರೋಕರು 250 ಡಾಲರುಗಳಿಗೆ ಕೊಂಡುಕೊಂಡನು.

★

ಪಾನನಿರೋಧ

ನವದೆಹಲಿ— ದೇಶದಲ್ಲಿ ಪಾನನಿರೋಧವನ್ನು ಜಾರಿಗೆ ತರುವಿರುವದು ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿಯಲ್ಲಿ ಕಟುವಾಗಿ ಟೀಕಿಸಲ್ಪಟ್ಟಿತು — ಸರಕಾರವು ಒಬ್ಬ ಸಾರಾಯಿ ತಯಾರಿಸುವವನಿಗೆ ಪದ್ಮಶ್ರೀ ಪ್ರಶಸ್ತಿ ಕೊಟ್ಟಿರುವದನ್ನು ಖಂಡಿಸಲಾಯಿತು.

★

ಬೊಂಬಾಯಿ— ಹರಿಯಾಣದಿಂದ 34 ತೆರೆದ ವ್ಯಾಗನ್‌ಗಳಲ್ಲಿ ಬಂದ 2680 ಚೀಲ ಗೋಧಿ ಮಳೆಯಿಂದ ಕೆಟ್ಟುಹೋಯಿತು.

ಹಿಂದೂಗಳ ಆಚಾರ

ಸಂಗ್ರಾಹಕರು— 'ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

★

(ಮುಂದುವರಿದುದು)

ಈ ರೀತಿ ಧಾರ್ಮಿಕವಾಗಿ ಇಪ್ಪತ್ತೈದು ಶತಮಾನಗಳಿಂದಲೂ, ತನ್ನ ಉಳಿವಿ ಣಗಿ ಹೋರಾಡಬೇಕಾಯಿತು. ಇದೇ ಸಂದರ್ಭದಲ್ಲಿ ಸಾಮಾನ್ಯರು ಬೇರೆ ಮತಕ ರ ಸಂಪರ್ಕದಿಂದಾಗಿ ತಮ್ಮ ಧರ್ಮದ ಬಗ್ಗೆ ನಾನಾ ರೀತಿಯ ಸಂದೇಹಗಳನ್ನು ಹೊಂದಿದರು. ರಾಜಕೀಯ ಆಕ್ರಮಣದಿಂದ ದುರ್ಬಲರಾಗಿದ್ದ ಕ್ಷತ್ರಿಯರು ತಮ್ಮ ಕರ್ತವ್ಯವಾದ ವರ್ಣಾಶ್ರಮ ವ್ಯವಸ್ಥಾಪಾಲನೆಯನ್ನು ಸಮರ್ಪಕವಾಗಿ ಮಾಡಲಿಲ್ಲ. ಶಾಸ್ತ್ರಗಳ ಬಗ್ಗೆ ಸರಿಯಾದ ತಿಳುವಳಿಕೆ ನೀಡಬೇಕಾದ ಬ್ರಾಹ್ಮಣರು, ಶಾಸ್ತ್ರರೀತಿ ಯ ಮಾರ್ಗಗಳಿಂದ ತಮ್ಮ ಜೀವನವು ಸಾಗಬೇ ಇದ್ದುವರಿಂದ ಅನ್ಯವೃತ್ತಿಗಳನ್ನು ಅವಲಂಬಿಸಲಾರಂಭಿಸಿದರು. ಕಾಲಕ್ರಮೇಣ ತಮ್ಮ ಕರ್ತವ್ಯವನ್ನು ಪೂರ್ಣ ಮಾಡ್ಕಿ ತು, ಕೇವಲ ಅರ್ಥ, ಕಾಮ ಪುರುಷಾರ್ಥ ಸಾಧನೆಯಲ್ಲೇ ನಿರತರಾದರು. ತಮ ಜೀವನದ ಬಗ್ಗೆ ಯಾರಾದರೂ ಪ್ರಶ್ನಿಸಿವಲ್ಲಿ, ಶಾಸ್ತ್ರದ ಯಾವುದೇ ಭಾಗದ ಶ್ಲೋಕ ವನ್ನು ಹೇಳಿ ತಮ್ಮನ್ನು ಸಮರ್ಥಿಸಿಕೊಳ್ಳಲಾರಂಭಿಸಿದರು. ಇದರಿಂದ ವರ್ಣಾಶ್ರಮ ವ್ಯವಸ್ಥೆ ಸಂಪೂರ್ಣ ಕೆಟ್ಟು ಕಲಸುಮೇಲೋಗರವಾಗಿರುವ ಇಂದಿನ ಸಮಾಜವನ್ನು ಕಾಣುತ್ತಿದ್ದೀವಿ.

ಇಂಗ್ಲೀಷರು ರಾಜ್ಯಭಾರ ಮಾಡುತ್ತಿದ್ದ ಕಾಲದಲ್ಲಿಯೇ ಹಿಂದೂಗಳ ಪೂರ್ವ ಪರಂಪರೆಯು ಪೂರ್ಣ ವಿಸ್ಮೃತಿಯುಂಟಾಗುವಂತೆ ಮಾಡಬೇಕೆಂಬ ಅಭಿಲಾಷೆಯಿಂ ದ ಸಂಸ್ಕೃತಕ್ಕೆ ಬದಲಾಗಿ ಇಂಗ್ಲೀಷನ್ನು ಶಾಲೆಗಳಲ್ಲಿ ಬಾಲಕರಿಗೆ ಬೋಧಿಸಲಾರಂ ಭಿಸಿದರು. ರಾಜಾ ರಾಮಮೋಹರ್ ರಾಯ್ ಮುಂತಾದ ಕೆಲವು ಹಿಂದೂಗಳೂ ಇದಕ್ಕೆ ಜೈಂಬಲಕೊಟ್ಟರು. ಈ ರೀತಿ ಬಾಲಕರಿಗೆ ತಮ್ಮ ಸಂಸ್ಕೃತಿಯ ಬಗ್ಗೆ ತಿರ ಸ್ಕಾರವನ್ನೂ ಪರ ಸಂಸ್ಕೃತಿಯಲ್ಲಿ ಅಭಿಮಾನವನ್ನೂ ಉಂಟುಮಾಡುವ ವಿದ್ಯಾ ಭ್ಯಾಸದ ಫಲವಾಗಿ, ವರ್ಣಾಶ್ರಮ ವ್ಯವಸ್ಥೆಗೂ, ಹಿಂದೂಗಳ ಆಚಾರಕ್ಕೂ ಹಾನಿ ಯುಂಟಾಗುತ್ತಿದೆ. ಇಂದಿನ ವಿದ್ಯಾರ್ಥಿಗಳು ಆಚಾರವನ್ನು ಅನುಸರಿಸುವುದಿರಲಿ, ಬೇರೆ ಯಾರಾದರೂ ಅನುಸರಿಸಲೂ ಅವಕಾಶ ಕೊಡದೇ ಇರುವ ಮಟ್ಟಿನ ದ್ವೇಷವ ನ್ನು ಹೊಂದಿದ್ದಾರೆ. ಹಿಂದೂ ಸಂಸ್ಕೃತಿ, ಆಚಾರಗಳ ಬಗ್ಗೆ ಅವರಿಗೆ ಎಳ್ಳಷ್ಟೂ ಬೆಲೆಯಿಲ್ಲ. ಇದಕ್ಕೆ ಕಾರಣ ಬಾಲಕರಿಗೆ ದೊರಕುತ್ತಿರುವ ವಿಪರೀತ ಜ್ಞಾನವೇ ಆಗಿದೆ.

ವುಡ್‌ಲಾಂಡ್ಸ್ ಆಷೋಢ 5 ನೇ ವಾರ

— ಮನೋಹರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

Jhuk Gaya Aasman

ಜುಕ್ ಗಯಾ ಆಸ್ಮಾನ್

ಪಾತ್ರ — ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಚೋಪ್ರ, ರಾಜೇಂದ್ರನಾಥ್

ಸಂಗೀತ— ಶಂಕರ್ ಜೈಕಿಷನ್ [ದಿನ 3 ಪ್ರದರ್ಶನಗಳು]

ಅಪೇರ— ಜನವರಿಯ 4 ನೇ ವಾರ

ಚಿತ್ರಾಕರ್ಷ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವತ್ಥ್ ಬಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣಕ್ಕೆ ಬೆಂಬಲ ನೀಡಿ

ಶ್ರೀಜಗದ್ಗುರು ಪುರುಷೋತ್ತಮಾನಂದ ಭಾರತೀ ಮಹಾಸ್ವಾಮಿಗಳವರು, ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಾನಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಕರ್ನಾಟಕದಲ್ಲಿ ಗೋರಕ್ಷಣೆ ಪ್ರಾಣಿದಯೆ, ಕೃಷಿಕಾರ್ಯ, ಪಶುವೈದ್ಯ, ಎಲ್ಲರಿಗೂ ಏಕೈಕ ಪುಣ್ಯಕಾರ್ಯವಾಗಬೇಕಿದೆ : ವಾರ್ಷಿಕ ಚಂದಾ 50 ನ್ಯೆಸೆ

— ಗೋರಕ್ಷಣಾ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣಾಕ್ಕೆ ಹೊಸಸಂಘಗಳನ್ನೂ ಹೊಸ ಚಂದಾದಾರರನ್ನೂ ಪತ್ರದ್ವಾರಾ ಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾಣವನ್ನು ಕಳಿಸಿಕೊಡುವಲ್ಲಿ ಇಷ್ಟೆಂದು ಚಂದಾ ಪಾವತಿಮಾಡಬೇಕಾಗಿ ವಿನಂತಿ

ಜಾಯಿಂಟ್ ಎಸ್. ಸಾರಂಗಯ್ಯಂಗಾರ್, ಶ್ರೀ ಹಿರಣ್ಯವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ. ಬಿ. ಶಾಸ್ತ್ರಿಗಳು, 4030 ವಿದ್ಯಾರಣ್ಯಪುರಂ, ಮೈಸೂರು

ಶ್ರೀ ಅನಂತಸಂಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ, ಹೊಂಗಸಂದ್ರ

ಗೋರಕ್ಷಣಾ ಆಫೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ ಮೈಸೂರು 4

ವಿಳಾಸ — ಗೋರಕ್ಷಣಾ ಆಫೀಸು 1067 ಚಾಮರಾಜಪುರಂ, ಮೈಸೂರು

SHAKTI

SUDHA

A Superb Tonic



ಏಳೈ ಮಾನವನೇ ! ನಿನ್ನನ್ನು ರಕ್ಷಿಸುವ ನನ್ನನ್ನು ಕೊಲ್ಲುವೆಯಾ ?

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಕೋರ್ಟಿನ ಮುಂದೆ ಹ್ಯಾಬೀಯಸ್ ಕಾರ್ಪಸ್ ಅರ್ಜಿಗಳು ಬೇಕೆಂದಾಗ ಬರಲಿ

Edited, Printed & Published by Dharmaprachara Niratha M S Krishna Rao (Proprietor) at the Satyavadi Press Chamarajapuram, Mysore 4